# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 47 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 29-01-2021. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ಸರಿಯಾಗಿ ನಿಭಾಯಿಸದೇ ಇದ್ದರೂ ಸಹ ಇಲಾಖೆಯ ಪಿ.ಡಿ.ಓ ಗಳು ಗ್ರಾಮ ಸಭೆಗಳು ಆಗಿದೆ ಎಂದು ಸರ್ಕಾರಕ್ಕೆ ತಪ್ಪು ವರದಿಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಗ್ರಾಮ ಪಂಚಾಯಿತಿಗಳು ಮಕ್ಕಳ ಸಮಸ್ಯೆಗೆ ಸ್ಪಂದಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಗ್ರಾಮ ಪಂಚಾಯಿತಿಯ ಪಿ.ಡಿ.ಓ ಗಳ ಮೇಲೆ ಕೈಗೊಂಡ ಕ್ರಮಗಳೇನು; | ಬಂದಿಲ್ಲ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3-ಹೆಚ್ 2(1) ರಲ್ಲಿ ಮಕ್ಕಳ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ವರ್ಷಕ್ಕೆ ಒಂದು ಬಾರಿಯಾದರೂ ಮಕ್ಕಳ ಗ್ರಾಮ ಸಭೆ ನಡೆಸಿ, ಅವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 14 ನವೆಂಬರ್ 2020 ರಿಂದ 28 ಫೆಬ್ರವರಿ 2021 ರವರೆಗೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಅದರಂತೆ ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುತ್ತಿವೆ. ಸುತ್ತೋಲೆ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| (ಆ) | ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಸರಿಯಾಗಿ ನಿಭಾಯಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮಕ್ಕಳ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಪ್ರಸ್ತುತ ಇರುವ 6011 ಗ್ರಾಮ ಪಂಚಾಯತಿಗಳ ಪೈಕಿ 3826 ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸಲಾಗಿದೆ.<br><br>ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಸಿದ ದಿನಾಂಕ, ಮಕ್ಕಳ ಸಮಸ್ಯೆಗಳು / ಬೇಡಿಕೆಗಳು/ ಪ್ರಶ್ನೆಗಳು, ಗ್ರಾಮ ಪಂಚಾಯತಿ ನಿರ್ಣಯ, ಗ್ರಾಮ ಸಭೆ ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ಮಾಹಿತಿ ವಿವರವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಬೇಕಾಗಿರುತ್ತದೆ.<br><br>ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಸಭೆಗಳು ಆಗಿದೆ ಎಂದು ತಪ್ಪು ವರದಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳೆ ಮಕ್ಕಳ ಗ್ರಾಮ ಸಭೆ ನಡೆಸಲಾಗಿದೆ ಎಂದು ತಪ್ಪು ವರದಿ ನೀಡಿರುವುದು ಕಂಡು ಬಂದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುತ್ತದೆ.<br><br>ಗ್ರಾಮ ಪಂಚಾಯತಿಗಳಿಂದ ಮಕ್ಕಳ ಸಮಸ್ಯೆಗೆ ಸ್ಪಂದಿಸಲಾಗುತ್ತಿದೆ. |

| | | |
|---|---|---|
| | | ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಈ ಕೆಳಕಂಡ ನಿರ್ದಿಷ್ಟ ವಿಷಯಗಳ ಕುರಿತು ಚರ್ಚೆಗೆ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಲಾಗಿದೆ.<br><br>1. ತಮ್ಮ ವಸತಿ ಪ್ರದೇಶ / ಶಾಲೆಯಲ್ಲಿನ ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದಂತೆ ಶಾಲಾ ದಾಖಲಾತಿ, ಶಾಲೆ ಬಿಟ್ಟ ಮಕ್ಕಳು, ಹೆಣ್ಣು ಮಗುವಿನ ಶಿಕ್ಷಣ ಕುರಿತು ಹಾಗೂ ವಿಕಲಚೇತನರ ಅಗತ್ಯಗಳು.<br>2. ಬಾಲ್ಯ ವಿವಾಹ ಮತ್ತು ಮಕ್ಕಳ ಕಿಶೋರಾವ್ಯಸ್ಥೆಯ ಕಾರ್ಮಿಕತೆ, ಮಕ್ಕಳ ಜೀತ ಪದ್ಧತಿ.<br>3. ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಮಕ್ಕಳ ಮಾರಾಟ ಮತ್ತು ಸಾಗಾಟ.<br>4. ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ.<br>5. ಮಕ್ಕಳಿಗೆ ಚುಚ್ಚುಮದ್ದು ಮತ್ತು ಪೌಷ್ಟಿಕಾಂಶಗಳ ಲಭ್ಯತೆ.<br>6. ವಸತಿ ನಿಲಯಗಳ ಸಮಸ್ಯೆಗಳು.<br>7. ಪಂಚತಂತ್ರ ತಂತ್ರಾಂಶದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮೂಡಿಬಂದ ಇಲಾಖಾವಾರು ಮಕ್ಕಳ ಬೇಡಿಕೆಗಳು/ಸಮಸ್ಯೆಗಳು/ಪ್ರಶ್ನೆಗಳು ನಮೂದಿಸಲಾಗುತ್ತಿದೆ ಹಾಗೂ ಪ್ರತಿ 15 ದಿನಕ್ಕೊಮ್ಮೆ ಆ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಸ್ಥಿತಿಯನ್ನು ಹಾಗೂ ಕೈಗೊಂಡ ಕ್ರಮದ ಬಗ್ಗೆ ಪಂಚತಂತ್ರ ತಂತ್ರಾಂಶದಲ್ಲಿ ಇಂಧೀಕರಿಸಲಾಗುತ್ತಿದೆ. |

ಸಂ. ಗ್ರಾಅಪ 38 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

. ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 47 ಕ್ಕೆ ಅನುಬಂಧ-1

## ಕರ್ನಾಟಕ ಸರ್ಕಾರ

ಸಂಖ್ಯೆ: ಕಪಂರಾಅ/ಅಭಿವೃದ್ಧಿ/93/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:04.11.2020

## ಸುತ್ತೋಲೆ

**ವಿಷಯ:** ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 14 ನವೆಂಬರ್ 2020 ರಿಂದ 24 ಜನವರಿ 2021ರ ವರೆಗೆ, 10 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಗ್ರಾಮ ಪಂಚಾಯತಿಗಳಲ್ಲಿ "ಮಕ್ಕಳ ಹಕ್ಕುಗಳ ಗ್ರಾಮ ಸಭೆ" ನಡೆಸುವ ಕುರಿತು.

**ಉಲ್ಲೇಖ:** (1)ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993, ಅಧ್ಯಾಯ IIರ ಪ್ರಕರಣ 3(ಎಚ್)(2) )(i) ಮತ್ತು ಅಧ್ಯಾಯ IVರ ಪ್ರಕರಣ 61-ಎ

(2) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 367 ಗ್ರಾಪಂಅ 2006 ದಿನಾಂಕ: 18-09-2006

(3) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 638 ಗ್ರಾಪಂಅ 2007 ದಿನಾಂಕ 30-10-2007

(4) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 837 ಗ್ರಾಪಂಅ 2019 ದಿನಾಂಕ 25-10-2019

— — —

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮಕ್ಕಳ ಭಾಗವಹಿಸುವಿಕೆ ಹಕ್ಕು ಹಿನ್ನಲೆಯಲ್ಲಿ ಗ್ರಾಮ ಪಂಚಾಯತಿಗಳಿಂದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸಲು 2006ರಲ್ಲಿ ಪ್ರಮುಖವಾದ ನಿಲುವನ್ನು ತೆಗೆದುಕೊಂಡಿದೆ. ಇದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989, ಭಾರತದ ಸಂವಿಧಾನದಲ್ಲಿ ಮಕ್ಕಳಿಗಿರುವ ಹಕ್ಕುಗಳನ್ನು ಮಾನ್ಯ ಮಾಡುವುದರಲ್ಲಿ ಮಹತ್ತರವಾದ ಹೆಜ್ಜೆಯಾಗಿದೆ. ಈ ಮೂಲಕ ಗ್ರಾಮೀಣಾಭಿವೃದ್ಧಿಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡಲಾಗಿದೆ. 2006ರಿಂದ ಪ್ರತಿ ವರ್ಷವೂ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ನಿರ್ದೇಶನವು ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅಧ್ಯಾಯ II ರ ಪ್ರಕರಣ 3(ಎಚ್)(2)(I)ರಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಬಹುದು (2015ರ ತಿದ್ದುಪಡಿಯಂತೆ).

ಭಾರತ ಸರ್ಕಾರವು, ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು 2030ನ್ನು ಒಪ್ಪಿಕೊಂಡಿದ್ದು, ಮಕ್ಕಳ ಆರೋಗ್ಯ ರಕ್ಷಣೆ, ಶಿಕ್ಷಣ ಅಭಿವೃದ್ಧಿ ಸಾಧನೆ ಹಾಗೂ ಹಸಿವು, ತಾರತಮ್ಯ ಮತ್ತು ಶೋಷಣೆ ಕೊನೆಗೊಳಿಸುವುದಕ್ಕೆ ಬದ್ಧವಾಗಿದೆ. ಈ ಹಿನ್ನಲೆಯಲ್ಲಿ ಮಕ್ಕಳ ಪರಿಸ್ಥಿತಿಯನ್ನು ತಳಮಟ್ಟದಿಂದಲೇ ಗಮನಿಸಿ ಆವಶ್ಯಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಎಲ್ಲಾ ಇಲಾಖೆಗಳು, ಜನಪ್ರತಿನಿಧಿಗಳು ಮತ್ತು ಸಮುದಾಯದ ಜವಾಬ್ದಾರಿಯಾಗಿದೆ. ಮಕ್ಕಳ ರಕ್ಷಣೆ, ಸರ್ವಾಂಗೀಣ ಅಭಿವೃದ್ಧಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೂಪಿಸಿರುವ ಹಲವು ಯೋಜನೆಗಳ ಹಿನ್ನಲೆಯಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ಎಲ್ಲರ ಕರ್ತವ್ಯವಾಗಿರುತ್ತದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಮಗ್ರ ಅಭಿವೃದ್ಧಿಯ ಅಂಶಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ 'ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ' ಪಂಚಾಯತಿಗಳನ್ನಾಗಿಸಲು 14 ನವಂಬರ್ 2020 ರಿಂದ 24 ಜನವರಿ 2021ರವೆಗೆ ಮಕ್ಕಳ,ವಿವಿಧ ಇಲಾಖೆಗಳ, ಇಲಾಖೇತರರ ಮತ್ತು ಸಮುದಾಯದ ಸಹಭಾಗಿತ್ವದಲ್ಲಿ 'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ'ವನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಭಾಗೀದಾರರ ಸಹಭಾಗಿತ್ವದಲ್ಲಿ ಪೂರ್ವ ಸಿದ್ಧತೆಗಾಗಿ ಸಭೆಯನ್ನು ನಡೆಸಿ 10 ವಾರಗಳ ಕಾರ್ಯಚಟುವಟಿಕೆಗಳ ವೇಳಾ ಪಟ್ಟಿ ಮತ್ತು ಸಾಧಿಸಬೇಕಾದ ಗುರಿಗಳ ಕುರಿತು ಕಾರ್ಯಯೋಜನೆ ತಯಾರಿಸಿ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

1. **'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ದ ಪೂರ್ವಭಾವಿ ಸಿದ್ಧತೆ:**

- **14 ನವೆಂಬರ್ 2020 ರಿಂದ 24 ಜನವರಿ 2021ರವೆಗೆ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ನಡೆಸುವ ಕುರಿತು ಪೂರ್ವಸಿದ್ಧತೆಗಾಗಿ ಗ್ರಾಮ ಪಂಚಾಯತಿ ಮಟ್ಟದ, ಮಕ್ಕಳಿಗೆ ಸಂಬಂಧಿಸಿದ ಸಮಿತಿಗಳಾದ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಬಾಲ ವಿಕಾಸ ಸಮಿತಿ, ಮಹಿಳಾ ಮತ್ತು ಮಕ್ಕಳ ರಕ್ಷಣೆ ಹಾಗೂ ಮಕ್ಕಳ ಸಾಗಾಟ ತಡೆ ನಿಗಾವಹಿಸುವ ಸಮಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ಸೇರಿದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (ತಿದ್ದುಪಡಿ 2015)ರ ಪ್ರಕರಣ 61-ಎರ ಅಡಿಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಲಾದ ವಿವಿಧ ಸಮಿತಿಯ ಪ್ರತಿನಿಧಿಗಳ ಮತ್ತು ವಿವಿಧ ಇಲಾಖೆ/ಇಲಾಖೇತರ ಭಾಗೀದಾರರ ಸಭೆಯನ್ನು 2020 ನವಂಬರ್ 10ರೊಳಗೆ ನಡೆಸುವುದು. ಈ ಸಭೆಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡಿ **14 ನವಂಬರ್ 2020 ರಿಂದ 24 ಜನವರಿ 2021ರವೆಗೆ** ಗ್ರಾಮ ಪಂಚಾಯತಿಯಿಂದ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ಕುರಿತು ಚರ್ಚಿಸಿ 10 ವಾರಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು, ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧಿಸಬೇಕಾದ ಗುರಿಗಳ (ಅನುಬಂಧ-ಎ ರಲ್ಲಿ ನಮೂದಿಸಲಾಗಿದೆ) ಕುರಿತು ತಾತ್ಕಾಲಿಕ ದಿನಾಂಕಗಳೊಂದಿಗೆ ವಿವರವಾದ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. ಕಾರ್ಯಕ್ರಮ/ ಚಟುವಟಿಕೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.(ತಾತ್ಕಾಲಿಕ ಕರಡು ವೇಳಾಪಟ್ಟಿ ಲಗತ್ತಿಸಿದೆ.)

- **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"**ದ ಅಂಗವಾಗಿ 10 ವಾರಗಳಲ್ಲಿ (ಪ್ರತಿವಾರ) ಈ ಕೆಳಗಿನ ಕಾರ್ಯಕ್ರಮ/ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.

  - ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
  - ಪೌಷ್ಟಿಕ ಆಹಾರ ಕುರಿತು ಮಾರ್ಗದರ್ಶನ ಹಾಗೂ ಜಾಗೃತಿ.
  - ಮಕ್ಕಳಿಗೆ ಚುಚ್ಚುಮದ್ದು ಪ್ರಾಮುಖ್ಯತೆ.
  - ಮಕ್ಕಳ ಕ್ರೀಡಾಕೂಟ.
  - ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳು.
  - ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮಗಳು.
  - ಸ್ಥಳೀಯ ಸಾಂಪ್ರದಾಯಿಕ ಆಟೋಟಗಳು/ಚಟುವಟಿಕೆಗಳು.
  - ಜನಪದ ಗೀತೆಗಳು ಮತ್ತು ರಂಗಭೂಮಿ ಕಾರ್ಯಕ್ರಮಗಳು.
  - ಮಾನಸಿಕ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳು.
  - ಶೈಕ್ಷಣಿಕ ಮತ್ತು ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮ.
  - ಚಿತ್ರಕಲೆ ಕಾರ್ಯಕ್ರಮ.

- ಪೂರ್ವ ಸಿದ್ಧತೆ ಸಭೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಲ್ಲಿ ಇರುವ ಒಬ್ಬ ಸದಸ್ಯರನ್ನು 'ಪಂಚಾಯತಿ ಬಾಲ ಮಿತ್ರ' ಎಂದು ಘೋಷಿಸುವುದು ಮತ್ತು ಈ 'ಬಾಲ ಮಿತ್ರ' ಅಧಿಕಾರಿ/ಅಧಿಕಾರೇತರರಾಗಿರಬಹುದು. ಇವರು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು.

  - ಗ್ರಾಮ/ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಯಲು ಅಧಿಕಾರಿ ಮತ್ತು ಅಧಿಕಾರೇತರರು ಹಾಗೂ ಗ್ರಾಮ ಪಂಚಾಯತಿಯೊಂದಿಗೆ ಸಮನ್ವಯ ಕಾರ್ಯ ಕೈಗೊಳ್ಳುವುದು.

➢ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಮಕ್ಕಳಿಗೆ ಸುಲಭವಾಗಿ ಸಿಗುವಂತಿರಬೇಕು; ಮಕ್ಕಳ ಸಮಸ್ಯೆಗಳನ್ನು ಆಲಿಸಬೇಕು; ಮಕ್ಕಳ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸಲಾಗುವುದು ಎಂಬ ಭರವಸೆ ಮೂಡಿಸಬೇಕು ಹಾಗೂ ಮಕ್ಕಳಿಂದ ಮಕ್ಕಳಿಗೆ ಸಂಬಂಧಪಟ್ಟ ಸಮಸ್ಯೆಗಳ ಕೋರಿಕೆ ಪತ್ರಗಳನ್ನು ಸ್ವೀಕರಿಸುವುದು.

➢ ಗ್ರಾಮ/ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳಲ್ಲಿ ಮಕ್ಕಳಿಂದ ಮತ್ತು ಹಿತೈಷಿಗಳಿಂದ ಮೂಡಿಬಂದ ಮಕ್ಕಳ ಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳು ಚರ್ಚೆಯ ನಿರ್ಣಯಗಳಲ್ಲಿ ಬರುವಂತೆ ನೋಡಿಕೊಳ್ಳುವುದು.

➢ "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**"ದ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳಲ್ಲಿ/ಚಟುವಟಿಕೆಗಳಲ್ಲಿ ಗ್ರಾಮ ಪಂಚಾಯತಿ ಮತ್ತು ವಿವಿಧ ಭಾಗೀದಾರರೊಂದಿಗೆ ಸಮನ್ವಯತೆ ಸಾಧಿಸುವುದು.

➢ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳು ಸೇರಿದಂತೆ ಈ 10 ವಾರಗಳ ಅಭಿಯಾನದ ಅವಧಿಯಲ್ಲಿ ಮೂಡಿಬಂದ ಅಂಶಗಳನ್ನು ಒಳಗೊಂಡ ಕ್ರಿಯಾ ಯೋಜನೆಯನ್ನು ತಯಾರಿಸಲು ಸಹಕರಿಸುವುದು.

- ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು (2019-2020 ನೇ ಸಾಲಿನ ಹಾಗೂ ಅಕ್ಟೋಬರ್ 2020ರ ಅಂತ್ಯದವರೆಗೆ ಇರುವಂತೆ) ವಿವರಿಸಿರುವ ಅಂಕಿಸಂಖ್ಯೆಯ ಚಾರ್ಟ್ /ಪಟ್ಟಿಯನ್ನು ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಸಮನ್ವಯತೆಯಲ್ಲಿ ಸಿದ್ಧಪಡಿಸಿ ಅದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಫೇಸ್‌ಬುಕ್‌ನಲ್ಲಿ ಹಾಕಬೇಕು. ಅದರ ಪ್ರತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು ಹಾಗೂ ಕೇಳಿದವರಿಗೆ ಕೊಡುವ ಸಲುವಾಗಿ ಪ್ರತಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಈ ಪಟ್ಟಿಯನ್ನು ನವಂಬರ್ 10 ರೊಳಗೆ ಸಿದ್ಧಪಡಿಸಬೇಕು. ಈ ಪಟ್ಟಿ ಆಧರಿಸಿ ಮಕ್ಕಳ ಹಕ್ಕುಗಳ ಗ್ರಾಮಸಭೆಯಲ್ಲಿ ಚರ್ಚೆ ನಡೆಸಲು ಸಂಬಂಧಿತರೆಲ್ಲರೂ ಸಿದ್ಧರಿರಬೇಕು [ಅನುಬಂಧ-ಬಿ ಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿಗಳು-ಮಕ್ಕಳ ಗ್ರಾಮ ಸಭೆಯ ಮಾದರಿ ಅಂಕಿಸಂಖ್ಯೆಯ ಚಾರ್ಟ್ ನೀಡಲಾಗಿದೆ].
- ನವಂಬರ್ 07ರಂದು "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**" ದ ಕುರಿತು ರಾಜ್ಯ ಮಟ್ಟದಿಂದ ಯುಟ್ಯೂಬ್ ಲೈವ್/ನೇರ ಪ್ರಸಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಬೇಕು. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ 02 ಮಕ್ಕಳು ಭಾಗವಹಿಸಲು ಕ್ರಮ ಕೈಗೊಳ್ಳುವುದು ಹಾಗೂ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೂ ಸಹ ಈ ತರಬೇತಿಯಲ್ಲಿ ಬಾಗವಹಿಸಲು ತಿಳಿಸುವುದು.

## 2. ಮಕ್ಕಳ ಹಕ್ಕುಗಳ ದಿನಾಚರಣೆ- "ಓದುವ ಬೆಳಕು" ಕಾರ್ಯಕ್ರಮಕ್ಕೆ ಚಾಲನೆ:

ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಗ್ರಾಮೀಣ ಪ್ರದೇಶಗಳ ಜ್ಞಾನ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸುವ ಮೂಲಕ ಹಾಗೂ ಈ ಗ್ರಂಥಾಲಯಗಳು ಮಕ್ಕಳ ಕಲಿಕೆಗೆ ಆಶಾಕಿರಣವಾಗಿ ಅವರ ಉಜ್ವಲ ಭವಿಷ್ಯಕ್ಕೆ ದಾರಿದೀಪವಾಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು "**ಓದುವ ಬೆಳಕು**" ಕಾರ್ಯಕ್ರಮ ಜಾರಿಗೊಳಿಸಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ 6ರಿಂದ 18 ವರ್ಷದ ಎಲ್ಲಾ ಮಕ್ಕಳನ್ನು ಪಟ್ಟಿಮಾಡಿ ಶೇಕಡ 100ರಷ್ಟು ಮಕ್ಕಳನ್ನು ತಮ್ಮ ಹತ್ತಿರದ ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಉಚಿತವಾಗಿ ನೊಂದಾಯಿಸುವುದು. ದಿನಾಂಕ 14-11-2020 ರಂದು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಕ್ರಮವನ್ನು ನಡೆಸುವುದು ಮತ್ತು ಕನಿಷ್ಟ 20 ಮಕ್ಕಳನ್ನು ಗ್ರಾಮ

ಪಂಚಾಯತಿ ಗ್ರಂಥಾಲಯಕ್ಕೆ ನೊಂದಾಯಿಸುವ ಮೂಲಕ **"ಓದುವ ಬೆಳಕು"** ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕು ಹಾಗೂ ಈ ಕಾರ್ಯಕ್ರಮ ಕುರಿತು ಹೆಚ್ಚಿನ ಪ್ರಚಾರ ನೀಡಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ನೆರವಿನೊಂದಿಗೆ 14-11-2020 ರಿಂದ 15-12-2020 ರ ಒಳಗೆ ಗ್ರಾಮೀಣ ಪ್ರದೇಶದ 6-18 ವಯಸ್ಸಿನ ಶೇಕಡ 100 ಮಕ್ಕಳು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ನೊಂದಾಯಿಸಿಕೊಳ್ಳುವಂತೆ ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ನೊಂದಾಯಿಸಲಾದ ಎಲ್ಲಾ ಮಕ್ಕಳಿಗೆ ಒಂದು ಪುಸ್ತಕವನ್ನು ನೀಡುವುದು ಹಾಗೂ ಸದಸ್ಯತ್ವ ಶುಲ್ಕವನ್ನು ಗ್ರಾಮ ಪಂಚಾಯತಿಗಳು ಗ್ರಂಥಾಲಯ ಸೆಸ್‌ನಿಂದ ಭರಿಸುವುದು.

**3. ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆ:**

ಪ್ರತಿ ವರ್ಷವೂ ನಡೆಸುತ್ತಿದ್ದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಈ ವರ್ಷ ಕೆಲವು ಬದಲಾವಣೆ ಹಾಗೂ ಸೇರ್ಪಡೆಗಳೊಂದಿಗೆ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸಲು ನಿರ್ದೇಶಿಸಲಾಗುತ್ತಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸಿ, ಜಾರಿಗೊಳಿಸಲು ಅವರುಗಳ ಆಶೋತ್ತರಗಳು ಹಾಗೂ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಮಕ್ಕಳಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸಲು ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ಈ ವರ್ಷವೂ ಸಹ 14 ನವೆಂಬರ್ 2020 ರಿಂದ 24 ಜನವರಿ 2021 ರವರÀಗೆ ಅಗತ್ಯ ಪೂರ್ವ ತಯಾರಿಯೊಂದಿಗೆ ಗ್ರಾಮ ಪಂಚಾಯತಿಗಳು ನಡೆಸುವುದು ಹಾಗೂ ಸದರಿ ಸಭೆಯಲ್ಲಿ ಮಕ್ಕಳಿಂದ ಸ್ವೀಕರಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಬಗ್ಗೆ ಕ್ರಿಯಾ ಯೋಜನೆಯನ್ನು ರಚಿಸಿ ಅನುಷ್ಠಾನಗೊಳಿಸಬೇಕಾಗಿದೆ.

ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಉದ್ದೇಶ, ಪೂರ್ವ ತಯಾರಿ ಹಾಗೂ ವಿವಿಧ ಭಾಗೀದಾರರ ಜವಾಬ್ದಾರಿ ಮತ್ತು ಮಕ್ಕಳ ಹಕ್ಕುಗಳ ಗ್ರಾಮ ಸಭೆ ಪ್ರಕ್ರಿಯೆ ಹಾಗೂ ಸಭೆಯ ನಂತರದ ಕ್ರಮಗಳನ್ನು ಕುರಿತು ಉಲ್ಲೇಖಿತ (2), (3) ಮತ್ತು (4)ರ ಸುತ್ತೋಲೆಗಳ ಮೂಲಕ ಈಗಾಗಲೆ ತಿಳಿಸಲಾಗಿದ್ದು, ಸದರಿ ಸುತ್ತೋಲೆಗಳ ಕಡೆ ಗಮನಹರಿಸಿ ವಿವರಿಸಿರುವಂತೆ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುವುದು ಹಾಗೂ ಕೋವಿಡ್-19 ಸಾಂಕ್ರಾಮಿಕ ಪಿಡುಗಿನ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

3.1. 2018 ಮತ್ತು 2019ರಲ್ಲಿ ನಡೆಸಲಾದ ಎರಡು ವರ್ಷಗಳ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ, ಸದರಿ ಸಭೆಯಲ್ಲಿನ ನಿರ್ಣಯಗಳ ಜಾರಿಗಾಗಿ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ, ಸ್ಥಳೀಯ ಸ್ವಸಹಾಯ ಸಂಘಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ ಮುಂಚಿತವಾಗಿ ಹಂಚಿಕೊಂಡು ಅವರುಗಳ ಪ್ರತಿಕ್ರಿಯೆ ಮತ್ತು ಶಿಫಾರಸ್ಸುಗಳನ್ನು ಪಡೆದು ಅಂತಿಮಗೊಳಿಸುವುದು. ಸದರಿ ವರದಿಯನ್ನು 2020ರ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಪ್ರಸ್ತುತ ಪಡಿಸುವುದು.

3.2. ಗ್ರಾಮ ಪಂಚಾಯತಿಯ ಆಡಳಿತಾಧಿಕಾರಿಗಳು ತಮ್ಮ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಯೊಂದಿಗೆ ಸಮಾಲೋಚಿಸಿ ನವಂಬರ್ 10 ರೊಳಗೆ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ದಿನಾಂಕವನ್ನು ನಿಗದಿಗೊಳಿಸಬೇಕು. 24 ಜನವರಿ 2021 ರೊಳಗೆ ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಸುವುದು.

3.3.**ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ರಕ್ಷಣೆ ಫೇಸ್ ಬುಕ್ ಪೇಜ್:** ಪ್ರತಿ ಗ್ರಾಮ ಪಂಚಾಯಿತಿಯಿಂದ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಗ್ರಾಮ ಪಂಚಾಯತ್ ಫೇಸ್ ಬುಕ್ ಪೇಜ್ ರಚಿಸುವುದು. ಈ ಫೇಸ್ ಬುಕ್ ಪೇಜ್‌ಗೆ ತಮ್ಮ ಗ್ರಾಮ ಪಂಚಾಯತಿ ಹೆಸರಿನೊಂದಿಗೆ ಮಕ್ಕಳ ಹಕ್ಕುಗಳ ರಕ್ಷಣೆ (ಉದಾ: ----ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ರಕ್ಷಣೆ, ಜಿಲ್ಲೆ ಮತ್ತು ತಾಲ್ಲೂಕಿನ ಹೆಸರು.) ಎಂಬ ಹೆಸರಿನ ಫೇಸ್ ಬುಕ್ ಪೇಜ್‌ನ್ನು ಆಯಾ ಶಾಲಾ ಶಿಕ್ಷಕರು, ಸ್ಥಳೀಯ ಸ್ವಯಂಸೇವಾ ಸಂಘಟನೆಗಳ ಮೂಲಕ ಮಕ್ಕಳಿಗೆ ತಿಳಿಯಪಡಿಸಿ, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳು, ಆಹಾರ ಮತ್ತು ಪೌಷ್ಠಿಕತೆ, ವಿಪತ್ತು ನಿರ್ವಹಣೆ,

ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ,ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ಅವರ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಪೇಸ್ ಬುಕ್ ಪೇಜ್‌ನಲ್ಲಿ ದಾಖಲಿಸಲು ಸಹಾಯ ಮಾಡುವುದು. ಗ್ರಾಮ ಪಂಚಾಯತಿಯಿಂದ ಈ ಫೇಸ್ ಬುಕ್ ಪೇಜಿನಲ್ಲಿ ಮಕ್ಕಳಿಂದ ಬಂದ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿಯನ್ನು ನಮೂನೆ-1ರಲ್ಲಿ ತಯಾರಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಂಡಿಸುವುದು. ಫೇಸ್ ಬುಕ್ ಪೇಜ್‌ನಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಹೊರತು ಪಡಿಸಿ ಬೇರೆ ಅಸಮಂಜಸ ವಿಷಯಗಳು ಬಂದಲ್ಲಿ ಅವುಗಳನ್ನು ಪರಿಗಣಿಸುವ ಕುರಿತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸೂಕ್ತ ನಿರ್ಣಯ ತೆಗೆದುಕೊಳ್ಳುವುದು ಅಥವಾ ಫೇಸ್ ಬುಕ್ ಪೇಜಿನಿಂದ ತೆಗೆದು ಹಾಕಬಹುದು. ಮಕ್ಕಳ ಫೋಟೋಗಳನ್ನು ಅಪ್‌ಲೋಡ್ ಮಾಡುವಾಗ ವೈಯಕ್ತಿಕತೆಗೆ ಧಕ್ಕೆ ಬಾರದಂತೆ ಖಾಸಗಿತನವನ್ನು ಕಾಪಾಡುವುದು.

3.4. **ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ 'ಮಕ್ಕಳ ಧನಿ' ಪೆಟ್ಟಿಗೆ: ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಮುಂಚಿತವಾಗಿ**

- ಮಕ್ಕಳು ಮತ್ತು ಮಕ್ಕಳ ಪರವಾಗಿ ಆಸಕ್ತರು/ಹಿತೈಷಿಗಳು ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಬರೆದು ಹಾಕಲು ಅನುಕೂಲವಾಗುವಂತೆ **'ಮಕ್ಕಳ ಧನಿ'** ಪೆಟ್ಟಿಗೆಯನ್ನು ಆಕರ್ಷಣೀಯವಾಗಿ ಇರುವಂತೆ ತಯಾರಿಸುವುದು. ಈ **'ಮಕ್ಕಳ ಧನಿ'**ಪೆಟ್ಟಿಗೆಯ ಮೇಲೆ **ಮಕ್ಕಳ ಸಹಾಯವಾಣಿ ಸಂಖ್ಯೆ 1098** ಬರೆಯುವುದು ಹಾಗೂ ಪೆಟ್ಟಿಗೆಯ ಉದ್ದೇಶ ಮತ್ತು ಕೋರಿಕೆ ಪತ್ರದ ವಿವರವಿರುವ ಪೋಸ್ಟರ್‌ನ್ನು ಬರೆದು ಅಂಟಿಸುವುದು. (ಅನುಬಂಧ-ಸಿ)

- **'ಮಕ್ಕಳ ಧನಿ'** ಪೆಟ್ಟಿಗೆಯನ್ನು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಪ್ರತೀ ಗ್ರಾಮ/ವಾರ್ಡ್‌ನಲ್ಲಿ ಹೆಚ್ಚಿನ ಮಕ್ಕಳಿಗೆ ಅನುಕೂಲವಾಗುವಂತೆ ಆಯಾ ಗ್ರಾಮಗಳಲ್ಲಿನ ಹೆಚ್ಚಿನ ಜನರು ಓಡಾಡುವ / ಸೇರುವ / ಜನ ಸಂದಣಿ ಇರುವ ಸ್ಥಳಗಳಾದ ಶಾಲೆ, ವಸತಿ ನಿಲಯ, ಮಕ್ಕಳ ಪಾಲನೆ ಕೇಂದ್ರ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ, ಹಾಲು ಉತ್ಪಾದಕರ ಸಹಕಾರ ಸಂಘ, ಗ್ರಾಮ ಪಂಚಾಯತಿ ಕಚೇರಿ ಇತ್ಯಾದಿ ಸಾರ್ವಜನಿಕ ಕಚೇರಿ/ಕೇಂದ್ರಗಳಲ್ಲಿ ಶಾಲಾ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಪೊಲೀಸ್ ಪ್ರತಿನಿಧಿ, ಸ್ಥಳೀಯ ಸ್ವಸಹಾಯ ಸಂಘ, ಸ್ವಯಂಸೇವಾ ಸಂಘಟನೆಗಳ ಸಮನ್ವಯತೆಯೊಂದಿಗೆ ಇಡುವುದು.

- ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಪೋಸ್ಟರ್‌ಗಳ ವಿನ್ಯಾಸವನ್ನು ಮುದ್ರಿಸಿ 'ಮಕ್ಕಳ ಧನಿ' ಪೆಟ್ಟಿಗೆ ಇಡುವ ಸ್ಥಳದಲ್ಲಿ ಪ್ರದರ್ಶಿಸುವುದು. (ಅನುಬಂಧ-ಸಿ)

- **'ಮಕ್ಕಳ ಧನಿ'** ಪೆಟ್ಟಿಗೆಯನ್ನು ಇಡುವ ಸಮಯದಲ್ಲಿ ಸ್ಥಳೀಯ ಮಾಜಿ/ಹಾಲಿ ಚುನಾಯಿತ ಪ್ರತಿನಿಧಿಗಳು, ಸ್ಥಳೀಯ ಮುಖಂಡರು, ಸಂಘ/ಸಂಸ್ಥೆಗಳ ಪ್ರತಿನಿದಿಗಳನ್ನು ಸೇರಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆ, ಮಕ್ಕಳ ಕೋರಿಕೆ ಪತ್ರ ಹಾಗೂ 'ಮಕ್ಕಳ ಧನಿ'ಪೆಟ್ಟಿಗೆ ಕುರಿತು ಹಾಗೂ ಮಕ್ಕಳಿಗೆ ಸಂಬಂದಿಸಿದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳನ್ನು ಕೋರಿಕೆ ಪತ್ರದಲ್ಲಿ ಬರೆದು ಪೆಟ್ಟಿಗೆಯಲ್ಲಿ ಹಾಕಲು ಅಥವಾ ಸ್ಥಳೀಯ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಆರೋಗ್ಯ ಕಾರ್ಯಕರ್ತೆಯರಿಗೆ ತಲುಪಿಸಲು ತಿಳಿಸುವುದು. **(ಕೋರಿಕೆ ಪತ್ರದ ಮಾದರಿ-ಅನುಬಂಧ-ಡಿ )**

- ಗ್ರಾಮ ಪಂಚಾಯತಿಯಿಂದ ಅಗತ್ಯವಿರುವಷ್ಟು (ಮಕ್ಕಳ ಸಂಖ್ಯೆ ಆಧಾರದಮೇಲೆ) **ಮಕ್ಕಳ ಕೋರಿಕೆ ಪತ್ರ**ಗಳನ್ನು ಮುದ್ರಿಸಿ **'ಮಕ್ಕಳ ಧನಿ'**ಪೆಟ್ಟಿಗೆ ಇಡುವ ಸ್ಥಳದಲ್ಲಿ ಲಭ್ಯವಿರುವಂತೆ ಮಾಡುವುದು ಹಾಗೂ ಆಯಾ ಸ್ಥಳೀಯ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಆರೋಗ್ಯ ಕಾರ್ಯಕರ್ತೆಯರ ಹತ್ತಿರ ಲಭ್ಯವಿರುವಂತೆ ನೋಡಿಕೊಳ್ಳುವುದು.

•ಮಕ್ಕಳ ಕೋರಿಕೆ ಪತ್ರಗಳು ಮತ್ತು **'ಮಕ್ಕಳ ಧ್ವನಿ'**ಪೆಟ್ಟಿಗೆ ಕುರಿತು ಹೆಚ್ಚಿನ ಪ್ರಚಾರವನ್ನು ಆಯಾ ಸ್ಥಳೀಯ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆ, ಸ್ವಸಹಾಯ ಸಂಘಗಳ ಪ್ರತಿನಿಧಿ ಹಾಗೂ ಸಂಘ ಸಂಸ್ಥೆಗಳ ಮೂಲಕ ತಿಳಿಯಪಡಿಸಿ ನಿಗದಿತ ದಿನಾಂಕದೊಳಗೆ ಮಕ್ಕಳು ಮತ್ತು ವಯಸ್ಕರು, ಮಕ್ಕಳಿಗೆ ಸಂಬಂಧಿಸಿದ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳುA,ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ ಕೇಂದ್ರ ,ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂದಿಸಿದ ತಮ್ಮ ಸಮಸ್ಯೆ/ಬೇಡಿಕೆಗಳನ್ನು ಬರೆದು ಈ ಪೆಟ್ಟಿಗೆಯಲ್ಲಿ ಹಾಕಲು ತಿಳಿಸುವುದು. ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ನಿಗದಿತ ದಿನಾಂಕಕ್ಕಿಂತ 03 ದಿನ ಮುಂಚಿತವಾಗಿ ಸಮಸ್ಯೆಗಳು/ಬೇಡಿಕೆಗಳನ್ನು ಬರೆದು ಈ ಪೆಟ್ಟಿಗೆಯಲ್ಲಿ ಹಾಕಲು ಅಂತಿಮ ದಿನಾಂಕವನ್ನು ನಿಗದಿಗೊಳಿಸಿ ಪೆಟ್ಟಿಗೆಯ ಮೇಲೆ ನಮೂದಿಸುವುದು.

•ಮಕ್ಕಳು ಮತ್ತು ಮಕ್ಕಳ ಪರ ವ್ಯಕ್ತಿಗಳು/ಹಿರಿಯರು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆ/ಬೇಡಿಕೆ/ಪ್ರಶ್ನೆಯನ್ನು ಕೋರಿಕೆ ಪತ್ರದಲ್ಲಿ ಬರೆದು ಮಕ್ಕಳ 'ಬಾಲ ಮಿತ್ರ', ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ ಶಿಕ್ಷಕ/ಶಿಕ್ಷಕಿಯರಿಗೆ ನೇರವಾಗಿ ಸಲ್ಲಿಸಲು ಕೂಡ ಅವಕಾಶವನ್ನು ಮಾಡುವುದು.

**•ಮಕ್ಕಳ ಕೋರಿಕೆ ಪತ್ರಗಳನ್ನು ಸಾಮಾಜಿಕ ಜಾಲ ತಾಣ, ವಾಟ್ಸ್‌ಪ್, ಇತ್ಯಾದಿ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಕ್ಕೆ ತಲುಪುವಂತೆ ಹಾಗೂ ಮುದ್ರಿಸಲಾದ ಕೋರಿಕೆ ಪತ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಸಮುದಾಯಕ್ಕೆ ಲಭ್ಯವಿರುವಂತೆ ವ್ಯವಸ್ಥೆಮಾಡುವುದು.**

•ಮಕ್ಕಳಿಂದ ಮತ್ತು ಮಕ್ಕಳ ಪರವಾಗಿ **'ಮಕ್ಕಳ ಧ್ವನಿ'** ಪೆಟ್ಟಿಗೆಯಲ್ಲಿ ಬರೆದು ಹಾಕಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಸ್ಥಳೀಯ ಪೊಲೀಸ್ ಪ್ರತಿನಿಧಿ ಮತ್ತು ಸ್ಥಳೀಯ ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆಗೆದು ಸಂಗ್ರಹಿಸಿ ಮತ್ತು ನೇರವಾಗಿ ಸಲ್ಲಿಸಲಾದ ಕೋರಿಕೆ ಪತ್ರದಲ್ಲಿನ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಪಟ್ಟಿ ಮಾಡಿ ನಮೂನೆ-1ರಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ ಸಿದ್ಧಪಡಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಂಡಿಸುವುದು.

### 3.5 ಮಕ್ಕಳ ಕೋರಿಕೆ ಪತ್ರ:

- ಅನುಬಂಧ-ಸಿರಲ್ಲಿ ತಿಳಿಸಲಾದ ಎ-3 ಅಳತೆಯ ಕೋರಿಕೆ ಪತ್ರವನ್ನು ಮುದ್ರಿಸಿ ಹೆಚ್ಚಿನ ಜನಸಂದಣಿ ಇರುವ ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳಲ್ಲಿ, ವಸತಿ ನಿಲಯಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ, ಗ್ರಾಮ ಪಂಚಾಯತಿ ಕಾರ್ಯಾಲಯಗಳಲ್ಲಿ ಮತ್ತು ಮಕ್ಕಳ ಧ್ವನಿ ಪೆಟ್ಟಿಗೆ ಇಡುವ ಸ್ಥಳದಲ್ಲಿ ಅಂಟಿಸುವುದು.

- ಅನುಬಂಧ-ಸಿರಲ್ಲಿ ತಿಳಿಸಲಾದ ಮಕ್ಕಳ ಧ್ವನಿ ಪೆಟ್ಟಿಗೆ ಮೆಸೇಜ್ ಪೋಸ್ಟರ್‌ನ್ನು ಮುದ್ರಿಸಿ ಮಕ್ಕಳ ಧ್ವನಿ ಪೆಟ್ಟಿಗೆಗೆ ಅಂಟಿಸುವುದು.

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಕೋರಿಕೆ ಪತ್ರಗಳನ್ನು ಗ್ರಾಮ ಪಂಚಾಯತಿಯಿಂದ ಮುದ್ರಿಸುವುದು.

### 3.6. ಗ್ರಾಮ/ವಾರ್ಡ್ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆ:

•ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಮೊದಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮುಖ್ಯೋಪಾಧ್ಯಾಯರುಗಳ ಮುಖಾಂತರ ಒಬ್ಬ

ಶಿಕ್ಷಕ/ಶಿಕ್ಷಕಿಯನ್ನು ಸಮನ್ವಯಾಧಿಕಾರಿಯನ್ನಾಗಿ ನೇಮಿಸುವುದು. ಈ ಸಮನ್ವಯ ಅಧಿಕಾರಿಯು ಕೋವಿಡ್-19 ಹರಡದಂತೆ ಎಲ್ಲಾ ಮುಂಜಾಗ್ರತ ಕ್ರಮಗಳನ್ನು (ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಜರ್ ಬಳಸುವುದು) ಅನುಸರಿಸಿ ಗ್ರಾಮ/ವಾರ್ಡ್ ಹಂತದಲ್ಲಿ ಮಕ್ಕಳ ಜೊತೆ ಪೂರ್ವಭಾವಿ ಮಕ್ಕಳ ಹಕ್ಕುಗಳ ಗ್ರಾಮ/ವಾರ್ಡ್ ಸಭೆಯನ್ನು ಸ್ಥಳೀಯ ಸ್ವಸಹಾಯ ಸಂಘದ (ಎಸ್.ಎಚ್.ಜಿ.) 02 ಪ್ರತಿನಿಧಿಗಳ ಸಹಾಯದೊಂದಿಗೆ ನಡೆಸುವುದು.

- ಮಕ್ಕಳ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಶಾಲಾ/ಗ್ರಾಮ/ವಾರ್ಡ್‌ನ ವಿದಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸಮಾನ ಅವಕಾಶ, ವಿಶೇಷವಾಗಿ ಶಾಲೆಯಿಂದ ಹೊರಗುಳಿದ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು), ವಿಕಲಚೇತನರು ಹಾಗೂ ಹೆಣ್ಣುಮಕ್ಕಳು (18 ವರ್ಷ ಪೂರ್ಣಗೊಳಿಸದ) ಭಾಗವಹಿಸಿ ಚರ್ಚಿಸಲು ಅವಕಾಶ ನೀಡಬೇಕು.

- ಗ್ರಾಮ/ವಾರ್ಡ್ ಮಟ್ಟದ ಸಭೆಯನ್ನು ವಿವಿಧ ಗುರಿ ಗುಂಪಿನ ಮಕ್ಕಳಿಗೆ ಅನುಕೂಲವಾಗುವ ದಿನ ಮತ್ತು ಸಮಯಕ್ಕೆ ನಡೆಸುವುದು.

- ಸದರಿ ವಾರ್ಡ್/ಗ್ರಾಮ ಮಟ್ಟದ ಮಕ್ಕಳ ಹಕ್ಕುಗಳ ಸಭೆಯಲ್ಲಿ,

  - ಮಕ್ಕಳ ಹಕ್ಕುಗಳ ಬಗ್ಗೆ, ಮಕ್ಕಳಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳು ಕುರಿತು ಸಂಕ್ಷಿಪ್ತವಾಗಿ ತಿಳಿಸುವುದು.
  - ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಉದ್ದೇಶ, ದಿನಾಂಕ ಮತ್ತು ಸ್ಥಳ ಹಾಗೂ ಅವರ ಭಾಗವಹಿಸುವಿಕೆ ಮಹತ್ವ ಕುರಿತು ಮಕ್ಕಳಿಗೆ ತಿಳಿಸುವುದು.
  - ಗ್ರಾಮ/ವಾರ್ಡ್ ಸಭೆಯಲ್ಲಿ ಮಕ್ಕಳಿಗೆ, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳು,ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ,ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ತಮ್ಮ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಮಾತನಾಡಲು ಮುಕ್ತ ಅವಕಾಶ ನೀಡುವುದು ಹಾಗೂ ಇವುಗಳ ವ್ಯವಸ್ಥೆ/ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಕುರಿತು ಚರ್ಚಿಸಿ ಅಥವಾ ಕೋರಿಕೆ ಪತ್ರದಲ್ಲಿ ಬರೆದು ಕೊಡಲು ತಿಳಿಸುವುದು. ಸದರಿ ಚರ್ಚೆಯಲ್ಲಿ ಮಕ್ಕಳಿಂದ ಮೂಡಿಬಂದ ಅಥವಾ ಕೋರಿಕೆ ಪತ್ರದ ಮೂಲಕ ಬಂದ ಸಮಸ್ಯೆಗಳು/ಬೇಡಿಕೆಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ-1ರಲ್ಲಿ ತಯಾರಿಸುವುದು.

- ಗ್ರಾಮ/ವಾರ್ಡ್ ಮಟ್ಟದಿಂದ, ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಎಲ್ಲಾ ಮಕ್ಕಳನ್ನು ಪ್ರತಿನಿಧಿಸಲು ಶಾಲೆಗೆ ಹಾಜರಾಗುತ್ತಿರುವ, ಶಾಲೆಯಿಂದ ಹೊರಗುಳಿದ, ವಿಶೇಷ/ವಿಕಲಚೇತನ, ಅಲೆಮಾರಿ ಕುಟುಂಬಗಳ ಮಕ್ಕಳು ಸೇರಿದಂತೆ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು) ಪ್ರತಿನಿಧಿಸುವ ಹಾಗೆ ಇಬ್ಬರು ಬಾಲಕರು ಮತ್ತು ಇಬ್ಬರು ಬಾಲಕಿಯರನ್ನು ಮಕ್ಕಳಿಂದಲೇ ಗುರುತಿಸುವುದು. ಗುರುತಿಸಲಾದ ಈ ಬಾಲಕ ಮತ್ತು ಬಾಲಕಿಯರೊಂದಿಗೆ ಸಂಬಂಧಿಸಿದ ಶಿಕ್ಷಕರು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿಗದಿತ ದಿನಾಂಕದಂದು ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ಹಾಜರಾಗುವುದು ಮತ್ತು ಗ್ರಾಮ/ವಾರ್ಡ್ ಮಟ್ಟದಲ್ಲಿ ಮಕ್ಕಳಿಂದ ಮೂಡಿಬಂದ ಸಮಸ್ಯೆಗಳ/ಬೇಡಿಕೆಗಳ ಪಟ್ಟಿಯನ್ನು ಮಂಡಿಸುವುದು.

- ಈ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳ ಮತ್ತು ಶಿಕ್ಷಕ/ಶಿಕ್ಷಕಿಯರ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.

- ಗ್ರಾಮ/ವಾರ್ಡ್ ಮಟ್ಟದ ಸಭೆಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಮುಂಚಿತವಾಗಿ ಪೂರ್ಣಗೊಂಡಿರಬೇಕು ಹಾಗೂ ಗ್ರಾಮ ಪಂಚಾಯತಿಯಿಂದ, ಫೇಸ್

ಬುಕ್ ಪೇಜಿನಲ್ಲಿ, ಮಕ್ಕಳ ಧನಿ ಪೆಟ್ಟಿಗೆಯಲ್ಲಿ ಮಕ್ಕಳಿಂದ ಬಂದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಪಟ್ಟಿಗಳನ್ನು ನಮೂನೆ-1ರಲ್ಲಿ ಕ್ರೋಢೀಕರಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ 03ದಿನಗಳ ಮುಂಚಿತವಾಗಿ ತಯಾರಿಸುವುದು ಮತ್ತು ಚರ್ಚಿಸಿ ಅಂತಿಮಗೊಳಿಸಲು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಂಡಿಸುವುದು.

**3.7. ಗ್ರಾಮ ಪಂಚಾಯತಿ ಮಟ್ಟದಲ್ಲಿನ ಮಕ್ಕಳ ಹಕ್ಕುಗಳ ಗ್ರಾಮ ಸಭೆ:**

- ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳೊಂದಿಗೆ ಸಮಾಲೋಚಿಸಿ ನಿಗದಿಪಡಿಸಲಾದ ದಿನಾಂಕದಂದು ನಡೆಸುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಕುರಿತು ಗ್ರಾಮ ಪಂಚಾಯತಿ ಆಡಳಿತ/ಉಸ್ತುವಾರಿ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಭಾಗೀದಾರರಾದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಮತ್ತು ಜಿಲ್ಲಾ ಮಟ್ಟದ ಮಕ್ಕಳ ಸಂರಕ್ಷಣಾಧಿಕಾರಿ,ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಎಸ್.ಡಿ.ಎಮ್.ಸಿ.ಯವರಿಗೆ, ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಕಾರ್ಮಿಕ ಇಲಾಖೆ, ಪೋಲಿಸ್ ಅಧಿಕಾರಿಗಳು, ಸ್ಥಳೀಯ ಸ್ವಸಹಾಯ ಸಂಘದ ಪ್ರತಿನಿಧಿಗಳು, ಯುವಕ/ಯುವತಿ ಮಂಡಳಿಗಳು,ಸ್ವಯಂ ಸೇವಾ ಸಂಸ್ಥೆಗಳಿಗೆ ಮುಂಚಿತವಾಗಿ ತಿಳಿಸುವುದು ಮತ್ತು ಈ ಎಲ್ಲಾ ಅಧಿಕಾರಿಗಳು ಮತ್ತು ಅಧಿಕಾರೇತರರು ಭಾಗವಹಿಸುವಂತೆ ನೋಡಿಕೊಳ್ಳುವುದು.

- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ/ತಾಲೂಕು ಕಾನೂನು ಸೇವಾ ಪ್ರಾಧಿಕಾರಕ್ಕೆ ವಿಶೇಷ ಆಹ್ವಾನ ಕೊಡುವುದು.

- ಶಾಲೆಗಳಲ್ಲಿರುವ ಮಕ್ಕಳ ಹಕ್ಕುಗಳ ಕ್ಲಬ್ ಪ್ರತಿನಿಧಿ, ಮಕ್ಕಳ ಸುರಕ್ಷತಾ ಸಮಿತಿಗಳ ಪ್ರತಿನಿಧಿ,ಶಾಲಾ ಕ್ಯಾಬಿನೆಟ್‌ನ ಮುಖ್ಯಮಂತ್ರಿ, ಮಹಿಳಾ ಮತ್ತು ಮಕ್ಕಳ ರಕ್ಷಣೆ ಹಾಗೂ ಮಕ್ಕಳ ಸಾಗಾಟ ತಡೆ ನಿಗಾವಹಿಸುವ ಸಮಿತಿಯ ಪ್ರತಿನಿಧಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರತಿನಿಧಿ,ಆಸಕ್ತ ಪೋಷಕರು ಇವರುಗಳಿಗೆ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ತಿಳಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ಹಾಜರಾಗುವಂತೆ ನೋಡಿಕೊಳ್ಳುವುದು.

- ಕೋವಿಡ್-19 ಹರಡಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಸಭೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಪಾಲಿಸುವುದು.ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚು ದೊಡ್ಡದಾದ ಆವರಣ, ಉತ್ತಮ ಗಾಳಿ, ಬೆಳಕು ಇರುವ ಪ್ರೌಢ ಶಾಲೆಗಳಲ್ಲಿ ಅಥವಾ ಸೂಕ್ತವಾದ ಸ್ಥಳದಲ್ಲಿ ನಡೆಸುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳು, ಅಧಿಕಾರೇತರರು (ಸಂಘಗಳ/ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು) ಹಾಗೂ ಮಕ್ಕಳು(ಗ್ರಾಮ/ವಾರ್ಡ್ ಸಭೆಯಲ್ಲಿ ಗುರುತಿಲಾದ ಮಕ್ಕಳ ಪ್ರತಿನಿಧಿಗಳು) ಸೇರಿದಂತೆ ಸಭೆಯಲ್ಲಿ ಸೇರಬೇಕಾದ ಸಂಖ್ಯೆಯನ್ನು ಮೊದಲೇ ನಿಗದಿಗೊಳಿಸುವುದು.

- ಸಭೆ ನಡೆಸಲಾಗುವ ಸ್ಥಳದಲ್ಲಿ ಕೈತೊಳೆಯಲು ಸ್ಥಳ, ಸಾಬೂನು ಮತ್ತು ನೀರಿನ ವ್ಯವಸ್ಥೆ ಮಾಡುವುದು, ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಪಾಡುವುದು. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಭೆಯಲ್ಲಿ ಮಕ್ಕಳಿಗೆ ಮತ್ತು ಅಧಿಕಾರಿಗಳು ಹಾಗೂ ಅಧಿಕಾರೇತರರಿಗೆ ಕೂರಲು ವ್ಯವಸ್ಥೆ ಮಾಡುವುದು, ಮಾತನಾಡಲು ಧ್ವನಿವರ್ಧಕ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

3.8. ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಕ್ಕಳಿಂದ ಈ ಕೆಳಕಂಡ ನಿರ್ದಿಷ್ಟ ವಿಷಯಗಳ ಕುರಿತು ಚರ್ಚೆಗೆ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿ ಹಾಗೂ ಇಂಥಹ ಸಮಸ್ಯೆಗಳನ್ನು ಪರಿಹರಿಸುವ ಸಲಹೆಗಳನ್ನು ಪಡೆಯುವುದು.

- ತಮ್ಮ ವಸತಿ ಪ್ರದೇಶ/ಶಾಲೆಯಲ್ಲಿನ ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದಂತೆ, ಶಾಲಾ ದಾಖಲಾತಿ, ಶಾಲೆ ಬಿಟ್ಟ ಮಕ್ಕಳು, ಹೆಣ್ಣು ಮಗುವಿನ ಶಿಕ್ಷಣ ಕುರಿತು ಹಾಗೂ ವಿಕಲ ಚೇತನರ ಅಗತ್ಯಗಳು.
- ಬಾಲ್ಯ ವಿವಾಹ, ಮಕ್ಕಳ ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ, ಮಕ್ಕಳ ಜೀತ ಪದ್ಧತಿ.
- ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಮಕ್ಕಳ ಮಾರಾಟ ಮತ್ತು ಸಾಗಾಟ.
- ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ.
- ಮಕ್ಕಳ ಜನನ ದಾಖಲಾತಿ ಮತ್ತು ಪ್ರಮಾಣ ಪತ್ರ ವಿತರಣೆ.
- ಮಕ್ಕಳಿಗೆ ಚುಚ್ಚು ಮದ್ದು ಮತ್ತು ಪೌಷ್ಟಿಕಾಂಶಗಳ ಲಭ್ಯತೆ.
- ವಸತಿ ನಿಲಯಗಳ ಸಮಸ್ಯೆಗಳು.
- ಇತರೆ ಸರ್ಕಾರಿ ಸೌಲಭ್ಯಗಳ ಲಭ್ಯತೆ ಮತ್ತು ಗುಣಮಟ್ಟ.

3.9. ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮತ್ತು ಇಲಾಖೇತರರು ಮಕ್ಕಳಿಗೆ ಈ ಕೆಳಕಂಡ ವಿಷಯಗಳ ಕುರಿತು ಅವರಿಗೆ ತಿಳಿಯುವ ಹಾಗೆ ಬಹಳ ಕಡಿಮೆ ಅವಧಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

- ಮಕ್ಕಳ ಹಕ್ಕುಗಳ (ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು) ಕುರಿತು.
- ಮಕ್ಕಳಿಗೆ ದೊರಕುವ ರೋಗ ನಿರೋಧಕ ಚುಚ್ಚುಮದ್ದು/ಲಸಿಕೆಗಳು, ಪೌಷ್ಟಿಕ ಆಹಾರ / ಮಾತ್ರೆ/ಪೇಯಗಳು, ಮಕ್ಕಳ ದೇಹದ ತೂಕ ಮತ್ತು ಎತ್ತರದ ಅಳತೆ ಮಾಡುವ ಪ್ರಾಮುಖ್ಯತೆ, ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ/ಉಪ ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದಲ್ಲಿ ದೊರಕುವ ಸೇವೆಗಳ ಕುರಿತು ತಿಳಿಸಬೇಕು
- ಸರ್ಕಾರದಿಂದ ಮಕ್ಕಳಿಗೆ ಲಭ್ಯವಿರುವ ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆಗಳು, ಮಧ್ಯಾಹ್ನದ ಬಿಸಿಯೂಟ, ಉಚಿತ ಪಠ್ಯಪುಸ್ತಕ,ಸಮವಸ್ತ್ರ ಮತ್ತು ಶೂಗಳ ವಿತರಣೆ, ಗ್ರಂಥಾಲಯ ಸೌಕರ್ಯ, ಕ್ರೀಡಾ ಚಟುವಟಿಕೆ, ವಸತಿ ನಿಲಯ, ಪ್ರಾಯೋಜನೆ (ಸ್ಪಾನ್ಸರ್‌ಶಿಪ್), ವಿದ್ಯಾರ್ಥಿ ವೇತನ ಮೊದಲಾದ ವಿಚಾರಗಳನ್ನು ಕುರಿತು ಮಾಹಿತಿ ನೀಡುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ, ಮಕ್ಕಳ ಸಾಗಾಣಿಕೆ ನಿಷೇಧ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ, ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 2016ರ ತಿದ್ದುಪಡಿಯಂತೆ, ಜೀತ ಪದ್ಧತಿ ನಿಷೇಧ ಕಾಯ್ದೆಗಳ, ವಿಶೇಷ ಚೇತನರ ಹಕ್ಕುಗಳ ಅಧಿನಿಯಮದ ಬಗ್ಗೆ ಹಾಗೂ ಚೈಲ್ಡ್‌ಲೈನ್ 1098 / ಮಕ್ಕಳ ಸಹಾಯವಾಣಿ ಬಗ್ಗೆ ಅರಿವು ಮೂಡಿಸುವುದು

- ಸ್ಥಳೀಯ ಪೊಲೀಸ್ ಠಾಣೆಯ ಪ್ರತಿನಿಧಿಗಳು ಹಾಜರಿದ್ದು ತಮ್ಮಲ್ಲಿ 'ತೆರೆದ ಮನೆ' (ಓಪನ್ ಹೌಸ್) ನಡೆಸುವ ದಿನಾಂಕದ ಮಾಹಿತಿಯನ್ನು ಹಂಚಿಕೊಳ್ಳಬೇಕು. ಚೈಲ್ಡ್‌ಲೈನ್ 1098 ಮತ್ತು ಮಕ್ಕಳ ಸಂರಕ್ಷಣಾ ಘಟಕದ ಸಿಬ್ಬಂದಿಯಿಂದ ಮಕ್ಕಳ ರಕ್ಷಣೆ ವಿಚಾರಗಳನ್ನು ವಿವರಿಸಬೇಕು.

- ಪ್ರಮುಖವಾಗಿ ಕೋವಿಡ್ ಸಮಯದಲ್ಲಿ ಬಾಲ್ಯವಿವಾಹಗಳು ಜರಗುತ್ತಿರುವ ಕುರಿತು ಹಾಗೂ ಮಕ್ಕಳ ಸಾಗಣೆ, ದುಡಿಮೆಗೆ ಮಕ್ಕಳನ್ನು ದೂಡುವುದರ ವಿರುದ್ಧ ಜನಜಾಗೃತಿ ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕುರಿತು ವಿಶೇಷ ಮಾಹಿತಿಗಳನ್ನು ನೀಡಬೇಕು.

3.10. ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಹೊರತು ಪಡಿಸಿ ಬೇರೆ ವಿಷಯಗಳ ಕುರಿತು ಚರ್ಚೆ ಆಗದಂತೆ ನೋಡಿಕೊಳ್ಳುವುದು ಮತ್ತು ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೆಚ್ಚಿನ ಸಮಯವನ್ನು ಕೊಡಬೇಕು. ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಮತ್ತು ಅಧಿಕಾರೇತರರು ಮಕ್ಕಳು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಮತ್ತು ತಿಳಿಸುವ ಸಮಸ್ಯೆ/ಬೇಡಿಕೆ/ಪ್ರಶ್ನೆಗಳನ್ನು ಗಮನವಿಟ್ಟು ಕೇಳುವುದು ಮತ್ತು ದಾಖಲಿಸುವುದು

3.11. **ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ,**

- ಮಕ್ಕಳ ಹಕ್ಕುಗಳ ಗ್ರಾಮ/ವಾರ್ಡ್ ಸಭೆಗಳಲ್ಲಿ ಮಕ್ಕಳಿಂದ ವ್ಯಕ್ತಪಡಿಸಲಾದ, ಫೇಸ್ ಬುಕ್ ಪೇಜಿನಲ್ಲಿ ಮೂಡಿಬಂದ, ನೇರವಾಗಿ ಕೋರಿಕೆ ಪತ್ರದ ಮೂಲಕ ಸಲ್ಲಿಸಲಾದ ಮತ್ತು ಮಕ್ಕಳ ಧನಿ ಪೆಟ್ಟಿಗೆಯಿಂದ ಸಂಗ್ರಹಿಸಲಾದ ಸಮಸ್ಯೆ/ಬೇಡಿಕೆಗಳ/ಪ್ರಶ್ನೆಗಳ ಕುರಿತು ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುವುದು ಹಾಗೂ ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮೂಡಿಬರುವ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಸಭೆಯಲ್ಲಿ ಚರ್ಚಿಸಿ, ಕ್ರೋಢೀಕರಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಬೇಕು. ಅಂತಿಮಗೊಳಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖಾ/ಕ್ಷೇತ್ರವಾರು ವಿಂಗಡಿಸಿ ನಮೂನೆ-1ರಲ್ಲಿ ಅಂತಿಮ ಪಟ್ಟಿಯನ್ನು ತಯಾರಿಸುವುದು ಮತ್ತು ಸಭಾ ನಡಾವಳಿ ಪುಸ್ತಕದಲ್ಲಿ ದಾಖಲಿಸುವುದು.

- ಮಕ್ಕಳ ಹಕ್ಕುಗಳ ಗ್ರಾಮಸಭೆಯ ಅನುಸರಣೆಯ ದೃಷ್ಟಿಯಿಂದ ಒಂದೇ ಪುಸ್ತಕದಲ್ಲಿ ಈ ನಡಾವಳಿ ಮತ್ತು ಠರಾವುಗಳನ್ನು ಬರೆಯಬೇಕು ಮತ್ತು ಅದನ್ನೇ ಮುಂದಿನ ವರ್ಷಗಳಲ್ಲೂ ಬಳಸಬೇಕು. ಹಿಂದಿನ ವರ್ಷ/ಗಳಲ್ಲಿ ನಿರ್ವಹಿಸಿದ್ದಲ್ಲಿ ಅದೇ ಪುಸ್ತಕದಲ್ಲಿ ನಡಾವಳಿ ಮತ್ತು ಠರಾವುಗಳನ್ನು ಬರೆಯುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳ, ಅಧಿಕಾರೇತರರ ಮತ್ತು ಮಕ್ಕಳ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ (ನಮೂನೆ-1) ಅಂತಿಮಗೊಳಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಪರಿಹರಿಸಲು ಕ್ಷೇತ್ರವಾರು ಮತ್ತು ಇಲಾಖಾವಾರು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಂದ ತೆಗೆದುಕೊಳ್ಳಬೇಕಾದ ಪರಿಹಾರ, ಕ್ರಮ ಮತ್ತು ಕಾಲಾವಧಿಯನ್ನು ನಿಗದಿಗೊಳಿಸಿ ಕ್ರಿಯಾಯೋಜನೆಯನ್ನು ಈ ಪತ್ರದೊಂದಿಗೆ ನೀಡಲಾದ ನಮೂನೆ-2ರಲ್ಲಿ ತಯಾರಿಸುವುದು. ಸಭಾನಡಾವಳಿ ಮತ್ತು ತಯಾರಿಸಲಾದ ಕ್ರಿಯಾ ಯೋಜನೆಯ ವಿವರಗಳನ್ನು ಪಂಚತಂತ್ರದಲ್ಲಿ ಅಪ್‌ಲೋಡ್ ಮಾಡುವುದು.

- 2020ರ ಮಕ್ಕಳ ಹಕ್ಕುಗಳ ಗ್ರಾಮಸಭೆಯ ನಡಾವಳಿಗಳು ಮತ್ತು ಠರಾವುಗಳ ಪ್ರತಿಯನ್ನು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ, ವಸತಿ ನಿಲಯಗಳಿಗೆ, ಮಕ್ಕಳ ಪಾಲನಾ ಕೇಂದ್ರ, ಅಂಗನವಾಡಿ ಕೇಂದ್ರಗಳಿಗೆ ಮತ್ತು ಆರೋಗ್ಯ ಕೇಂದ್ರಗಳಿಗೆ ಹಾಗೂ ಸ್ವಯಂಸೇವಾ ಸಂಘಟನೆಗಳಿಗೆ ಒಂದು ತಿಂಗಳ ಒಳಗೆ ಕಳುಹಿಸಿ ಅವರಿಂದ ಪ್ರತಿಕ್ರಿಯೆಗಳನ್ನು ತೆಗೆದುಕೊಂಡು ದಾಖಲಿಸುವುದು

• ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಠರಾವುಗಳು, ರೂಪಿಸಲಾದ ಕ್ರಿಯಾ ಯೋಜನೆ, ಗ್ರಾಮ ಪಂಚಾಯತಿಯಿಂದ ಅನುಷ್ಠಾನ ಮತ್ತು ಅನುಸರಣೆಗೆ ಸಂಬಂದಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಲವಾರು ಭಾಗೀದಾರರ ಜೊತೆ ಸಮನ್ವಯತೆಯಿಂದ ಕಾರ್ಯನಿರ್ವಹಿಸುವುದು ಹಾಗೂ ಮಕ್ಕಳಿಗೆ ಸಂಬಂಧಿಸಿದ ಗ್ರಾಮ ಪಂಚಾಯತಿ ಮಟ್ಟದಲ್ಲಿನ ಎಲ್ಲಾ ಸಮಿತಿಗಳ ಗಮನಕ್ಕೆ ತರುವುದು ಮತ್ತು ಸದರಿ ಸಮಿತಿಗಳಿಂದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ನಿರ್ಣಯಗಳು ಮತ್ತು ಕ್ರಿಯಾ ಯೋಜನೆಯು ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆದ 03 ತಿಂಗಳ ಒಳಗೆ ಗ್ರಾಮ ಪಂಚಾಯತಿಯಿಂದ ಅನುಷ್ಠಾನವಾಗುವಂತೆ ಹಾಗೂ ಪ್ರಗತಿ ವರದಿ ಸಲ್ಲಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

4. **<u>ಜಾಗೃತಿ ಕಾರ್ಯಕ್ರಮಗಳು</u>:** ಈ ಮೇಲೆ ವಿವರಿಸಲಾದ ಕಾರ್ಯಕ್ರಮ/ಚಟುವಟಿಕೆಗಳ ಜೊತೆಗೆ 24 ಜನವರಿ 2021ರ ವರೆಗೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸುವುದು.

• ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ಮತ್ತು ಸಮುದಾಯಕ್ಕೆ ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ ನಿಷೇಧ ಮತ್ತು ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ (ಬಾಲ ಕಾರ್ಮಿಕತೆ ಕಾಯ್ದೆಯ 2016ರ ತಿದ್ದುಪಡಿ) ಕುರಿತು ಉಪನ್ಯಾಸಗಳನ್ನು ನಡೆಸುವುದರ ಮೂಲಕ ಜಾಗೃತಿ ಮೂಡಿಸುವುದು.

• ಮಕ್ಕಳಿಗೆ ವೈಜ್ಞಾನಿಕ ಮನೋಭಾವನೆ ಬೆಳೆಸಲು ವಿಜ್ಞಾನ ಕುರಿತು ಹಾಗೂ ಪವಾಡ ಬಯಲು ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು.

• ಉಪನ್ಯಾಸ ಮತ್ತು ವಿಜ್ಞಾನ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ವಿವಿಧ ಸ್ಥಳಗಳಲ್ಲಿ ಕೋವಿಡ್-19 ಹರಡಂತೆ ಎಲ್ಲಾ ಮುಂಜಾಗ್ರತಾ ಮತ್ತು ಈ ಸಂಬಂಧ ಸರ್ಕಾರದಿಂದ ಹೊರಡಿಲಾದ ಮಾರ್ಗದರ್ಶಿಗಳನ್ನು ಅನುಸರಿಸಿ ನಡೆಸುವುದು.

5. **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ದ ಮೂಲಕ ಒತ್ತು ಕೊಡಬೇಕಾದ ಅಂಶಗಳು/ ಗುರಿಗಳು:**

5.1. ಶೇಕಡ 100 ರಷ್ಟು ಮಕ್ಕಳ ಜನನ ನೋಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ

5.2. ಶೇಕಡ 100 ರಷ್ಟು ಮಕ್ಕಳಿಗೆ ಚುಚ್ಚು ಮದ್ದು.

5.3. ಶೇಕಡ 100 ರಷ್ಟು 3 ರಿಂದ 6 ವರ್ಷದ ಮಕ್ಕಳು ಅಂಗನವಾಡಿ/ಪೂರ್ವ ಪ್ರಾಥಮಿಕ ಕೇಂದ್ರಗಳಿಗೆ ದಾಖಲಾತಿ ಹಾಗೂ ಹಾಜರಾತಿ

5.4. ಶೇಕಡ 100 ರಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ.

5.5. ಗ್ರಾಮ ಪಂಚಾಯತಿಯಲ್ಲಿನ ತೀವ್ರ ಅಪೌಷ್ಟಿಕ ಮತ್ತು ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳನ್ನು ಪತ್ತೆ ಹಚ್ಚುವುದು ಹಾಗೂ ಅಂಥಹ ಮಕ್ಕಳಿಗೆ ಪೌಷ್ಟಿಕ ಅಂಶವನ್ನು ಒದಗಿಸಲು ಪೂರೈಸಲು ಕ್ರಮ ಕೈಗೊಳ್ಳುವುದು.

5.6. ಶೇಕಡ 100 ರಷ್ಟು 6ರಿಂದ 14 ವರ್ಷದ ಮಕ್ಕಳು ಶಾಲೆಗೆ ದಾಖಲಾತಿ ಹಾಗೂ ಹಾಜರಾತಿ ( ಶಾಲೆಗಳ ಪ್ರಾರಂಭದ ಅವಧಿಯಲ್ಲಿ)

5.7. ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆಯಿಂದ ಮುಕ್ತತೆ (ಬಾಲ ಕಾರ್ಮಿಕತೆ ಯಿಂದ ಮುಕ್ತತೆ)

5.8. ಶೇಕಡ 0 ಬಾಲ್ಯ ವಿವಾಹ ಪ್ರಕರಣ

5.9. 18 ವರ್ಷ ಪೂರ್ಣಗೊಳ್ಳದ ಶೇಕಡ 100 ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ

5.10. ಮಕ್ಕಳ ಜೀತ ಪದ್ಧತಿ ಮುಕ್ತತೆ

5.11. ಮಕ್ಕಳ ಸಾಗಾಟ ತಡೆ

5.12. ಮಕ್ಕಳ ಸುರಕ್ಷತೆ

5.13. ಶಿಶು ಮರಣ ಪ್ರಮಾಣ ತಗ್ಗಿಸುವುದು.

6. **ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಜವಬ್ದಾರಿ:** ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ತಾಲ್ಲೂಕಿನಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಈ ಮೇಲೆ ವಿವರಿಸಿರುವಂತೆ 14 ನವಂಬರ್ 2020 ರಿಂದ 24 ಜನವರಿ 2021ರವರೆಗೆ 10 ವಾರಗಳ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ಮತ್ತು ಮಕ್ಕಳ ಹಕ್ಕುಗಳ ಗ್ರಾಮ ಸಭೆ ಸೇರಿದಂತೆ ವಿವಿದ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಸಲು ಹಾಗೂ ಮಕ್ಕಳ ಸುರಕ್ಷತೆಯೊಂದಿಗೆ ಮಕ್ಕಳಿಗೆ ಸಂಬಂದಿಸಿದ ಸುಸ್ಥಿರ ಗುರಿಗಳ ಎಲ್ಲಾ ಅಂಶಗಳ ಪರಿಣಾಮಕಾರಿ ಅನುಷ್ಠಾನದೊಂದಿಗೆ **ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಪಂಚಾಯತಿಗಳಾಗಿಸಲು** ಸೂಕ್ತ ಮಾರ್ಗದರ್ಶನಕ್ಕಾಗಿ ಮತ್ತು ಸಮನ್ವಯತೆಗಾಗಿ ಈ ಕೆಳಕಂಡ ಜವಬ್ದಾರಿ ನಿರ್ವಹಿಸುವುದು.

- ಗ್ರಾಮ ಪಂಚಾಯತಿಗಳಲ್ಲಿ ಆಯಾ ಗ್ರಾಮ ಪಂಚಾಯತಿಯ ಆಡಳಿತಾಧಿಕಾರಿಗಳು ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಉಸ್ತುವಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ನಿರ್ದೇಶನ ನೀಡುವುದು ಮತ್ತು ಇವರೊಂದಿಗೆ ಸಮಾಲೋಚಿಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ದಿನಾಂಕವನ್ನು ನಿಗದಿಪಡಿಸುವುದು ಮತ್ತು ಈ ಕುರಿತು ಸಂಬಂಧಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸೂಕ್ತ ಆದೇಶ ನೀಡುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಉಸ್ತುವಾರಿ ಅಧಿಕಾರಿಯಾದ ಗ್ರಾಮ ಪಂಚಾಯತಿ ಆಡಳಿತಾಧಿಕಾರಿಯು ನಿಗದಿತ ದಿನಾಂಕದಂದು ಗ್ರಾಮ ಪಂಚಾಯತಿಯಿಂದ ಮಕ್ಕಳ ಹಕ್ಕುಗಳ ಗ್ರಾಮ ಸಭೆ ಮತ್ತು ಇತರೆ ಕಾರ್ಯಕ್ರಮಗಳು ನಡೆಯುವಂತೆ ಕಾಲ ಕಾಲಕ್ಕೆ ಮಾರ್ಗದರ್ಶನ ನೀಡುವುದರ ಮೂಲಕ ಪೂರ್ವ ತಯಾರಿಗೆ ಬೆಂಬಲ ನೀಡುವುದು.

- ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಉಸ್ತುವಾರಿ ಅಧಿಕಾರಿಯು ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಹಾಜರಿದ್ದು ಕ್ರಮಬದ್ಧವಾಗಿ ನಡೆಯುವಂತೆ ಹಾಗೂ ವರದಿಯಾಗುವಂತೆ ನೋಡಿಕೊಳ್ಳುವುದು.

- ತಮ್ಮ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಸಭಾ ನಡಾವಳಿ, ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿಗಳಿಂದ ಪಂಚತಂತ್ರದಲ್ಲಿ ಅಳವಡಿಸಲು ಸೂಕ್ತ ಕ್ರಮ ಮತ್ತು ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

- ತಮ್ಮ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು 03 ತಿಂಗಳೊಳಗೆ ಅನುಷ್ಠಾನಗೊಳಿಸಲು ಅನುಸರಣೆ ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ತಾವು ತೆಗೆದುಕೊಂಡ ಕ್ರಮದ ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

- 14 ನವಂಬರ್ 2020 ರಿಂದ 24 ಜನವರಿ 2021ರ ವರಗೆ 10 ವಾರಗಳು ನಡೆಸಲಾದ ಕಾರ್ಯಕ್ರಮಗಳ ವರದಿ, ಈ ಅವಧಿಯಲ್ಲಿ ವಿವಿದ ಮೂಲಗಳಿಂದ ಬಂದ ಮಕ್ಕಳಿಗೆ ಸಂಬಂದಿಸಿದ ಅಂಶಗಳನ್ನು ಮಕ್ಕಳ ಗ್ರಾಮ ಸಭೆಯಲ್ಲಿ ಮೂಡಿಬಂದ ಅಂಶಗಳೊಂದಿಗೆ ಸೇರಿಸಿ ಅಂತಿಮವಾಗಿ ತಯಾರಿಸಲಾದ ಸಮಗ್ರ ಕ್ರಿಯಾ ಯೋಜನೆ ಮತ್ತು ಈ 10 ವಾರಗಳಲ್ಲಿ ಆದ ಕೆಲವು ಪ್ರಗತಿ ಕುರಿತು ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾಗಳಿಗೆ ಸಲ್ಲಿಸುವುದು.

## 7. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಬ್ದಾರಿ:

- ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿ ಆಡಳಿತ ಅಧಿಕಾರಿಗಳಿಗೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಹಾಗೂ ಈ ಮೇಲೆ ವಿವರಿಸಿರುವಂತೆ "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**"ದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಸಲು ಹಾಗೂ ಮಕ್ಕಳ ಸುರಕ್ಷತೆಯೊಂದಿಗೆ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಸುಸ್ಥಿರ ಗುರಿಗಳ ಪರಿಣಾಮಕಾರಿ ಸಾಧನೆಗೆ ಸೂಕ್ತ ಕ್ರಿಯಾ ಯೋಜನೆ ತಯಾರಿ ಹಾಗೂ ಅನುಷ್ಠಾನದೊಂದಿಗೆ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಪಂಚಾಯತಿಗಳಾಗಿಸಲು ಸೂಕ್ತ ಮಾರ್ಗದರ್ಶನÀಗಳನ್ನು ಮತ್ತು ಕಡ್ಡಾಯವಾಗಿ ಕೋವಿಡ್-19 ಹರಡದಂತೆ ಮುಂಜಾಗ್ರತ ಕ್ರಮಗಳನ್ನು ಪಾಲಿಸಲು ನಿರ್ದೇಶನ ನೀಡಿ ತಮ್ಮ ಜಿಲ್ಲೆಯಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ, ಸುಸ್ಥಿರ ಗುರಿಗಳ ಸಾಧನಗೆ ತೆಗೆದುಕೊಳ್ಳಲಾದ ಕ್ರಮ ಮತ್ತು ಕ್ರಿಯಾ ಯೋಜನೆ ತಯಾರಿ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

- ತಮ್ಮ ಜಿಲ್ಲೆಯಲ್ಲಿ 14ನೇ ನವಂಬರ್ 2020 ರಿಂದ 24ನೇ ಜನವರಿ 2021ರವರೆಗೆ ನಡೆಸಲಾಗುವ "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**" ಮತ್ತು ಮಕ್ಕಳ ಹಕ್ಕುಗಳ ಗ್ರಾಮ ಸಭೆ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ, ಮಾದ್ಯಮಗಳಲ್ಲಿ ಹೆಚ್ಚಿನ ರೀತಿಯ ಪ್ರಚಾರ ಮಾಡಲು ಹಾಗೂ **ಮಕ್ಕಳ ಕೋರಿಕೆ** ಪತ್ರವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

## 8. ರಾಜ್ಯ ಮಟ್ಟದಿಂದ ವಿಭಾಗವಾರು ಉಸ್ತುವಾರಿ ಅಧಿಕಾರಿಗಳ ಜವಾಬ್ದಾರಿಗಳು:

ಪಂಚಾಯತ್‌ರಾಜ್ ಆಯುಕ್ತಾಲಯ ಬೆಂಗಳೂರುವತಿಯಿಂದ ಬೆಂಗಳೂರು, ಮೈಸೂರು,ಬೆಳಗಾವಿ ಮತ್ತು ಗುಲಬರ್ಗಾ ವಿಭಾಗಗಳ ಉಪನಿರ್ದೇಶಕರುಗಳು, ಆಯಾ ವಿಭಾಗಗಳಲ್ಲಿನ ಗ್ರಾಮ ಪಂಚಾಯತಿಗಳಲ್ಲಿ 14 ನವಂಬರ್ 2020 ರಿಂದ 24 ಜನವರಿ 2021ರವರೆಗೆ ನಡೆಸಲಾಗುವ "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**"ದ ಪೂರ್ವ ತಯಾರಿ, ಮೇಲ್ವಿಚಾರಣೆ, ಅನುಸರಣೆಗಾಗಿ ಹಾಗೂ ವಿವಿಧ ಭಾಗೀದಾರರ ಜೊತೆ ಸಮನ್ವಯತೆಯಿಂದ ಸಂಯೋಜಿಸಲು ಮತ್ತು **ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ** ಗ್ರಾಮ ಪಂಚಾಯತಿಗಳನ್ನಾಗಿಸಲು ಜವಾಬ್ದಾರಿ ವಹಿಸಲಾಗಿದೆ.

ಈ ಮೇಲೆ ವಿವರಿಸಿರುವಂತೆ ರಾಜ್ಯ ಮಟ್ಟದಿಂದ ಗ್ರಾಮ ಪಂಚಾಯತಿ ಮಟ್ಟದ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸ್ಥಳೀಯ ಸಮುದಾಯ ಮತ್ತು ಅಧಿಕಾರೇತರರನ್ನು ತೊಡಗಿಸಿಕೊಂಡು ಕೋವಿಡ್ ಹರಡದÀ ಂತೆ ಸುರಕ್ಷಿತ ನಿಯಮಗಳನ್ನು ಅನುಸರಿಸಿ 14 ನವಂಬರ್ 2020 ರಿಂದ 24 ಜನವರಿ 2021 ವರೆಗೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ವಿನೂತನವಾಗಿ "**ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ**"ವನ್ನು ಪರಿಣಾಮಕಾರಿಯಾಗಿ ನಡೆಸಿ, ಗ್ರಾಮ ಪಂಚಾಯತಿಗಳಿಂದ ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಗ್ರಾಮ ಪಂಚಾಯತಿಗಳನ್ನಾಗಿಸಲು ಸೂಚಿಸಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಗ್ರಾಮ ಪಂಚಾಯತಿಗಳಲ್ಲಿ ವಿನೂತನವಾಗಿ ಹಮ್ಮಿಕೊಳ್ಳಲಾದ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"** ಕಾರ್ಯಕ್ರಮದ ಮೂಲಕ ತಯಾರಿಸಲಾದ ಕಾರ್ಯಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಕ್ಕಳ ಸ್ನೇಹಿ ಮಕ್ಕಳ ಸುರಕ್ಷಿತ ಗ್ರಾಮ ಪಂಚಾಯತಿಗಳನ್ನಾಗಿಸಲು ಸರ್ಕಾರದ ವಿವಿಧ ಇಲಾಖೆಗಳು ಸಮನ್ವಯತೆಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಹಾಗೂ ತಮ್ಮ ಇಲಾಖೆಗಳಿಂದ ಈ 10 ವಾರಗಳ ಅವಧಿಯಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ವಿನೂತನ ಕಾರ್ಯಕ್ರಮಗಳನ್ನು ನಡೆಸಲು ಸಂಬಂದಿಸಿದಂತೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕೋರಿದೆ.

ಉಮಾ ಮಹಾದೇವನ

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಕಛೇರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ರವರ ಆಪ್ತ ಕಾರ್ಯದರ್ಶಿ
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
6. ಸಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ. ಇವರ ಆಪ್ತ ಕಾರ್ಯದರ್ಶಿ.
7. ಸಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ

12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
13. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
14. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
15. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
16. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
17. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಆಪ್ತ ಸಹಾಯಕರು, ಕೆ.ಜಿ.ರಸ್ತೆ, ಬೆಂಗಳೂರು.
19. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಇವರ ಆಪ್ತ ಸಹಾಯಕರು
20. ಆಯುಕ್ತರು, ಕಾರ್ಮಿಕ ಇಲಾಖೆ , ಕಾರ್ಮಿಕ ಭವನ, ಬೆಂಗಳೂರು.
21. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.
22. ನಿರ್ದೇಶಕರು, ಮಕ್ಕಳ ಸಂರಕ್ಷಣಾ ನಿರ್ದೇಶನಾಲಯ / ಐ.ಸಿ.ಪಿ.ಎಸ್, ಕರ್ನಾಟಕ ಸರ್ಕಾರ
23. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
24. ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು
25. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ: ಕಪಂರಾಅ/ಅಭಿವೃದ್ಧಿ/93/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.01.2021

## ಸುತ್ತೋಲೆ

**ವಿಷಯ:** ಮಕ್ಕಳ ಹಕ್ಕುಗಳ ರಕ್ಷಣೆಗಾಗಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಗ್ರಾಮ ಪಂಚಾಯತಿಗಳಲ್ಲಿ "ಮಕ್ಕಳ ಹಕ್ಕುಗಳ ಗ್ರಾಮ ಸಭೆ" ಯನ್ನು ದಿನಾಂಕ 28-02-2021 ರವರೆಗೆ ವಿಸ್ತರಿಸಿರುವ ಕುರಿತು.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/93/2020 ದಿನಾಂಕ: 04.11.2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮಕ್ಕಳ ಭಾಗವಹಿಸುವಿಕೆ ಹಕ್ಕು ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಗಳಿಂದ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸುವ ಸದುದ್ದೇಶದಿಂದ ಪ್ರಸಕ್ತ ಸಾಲಿನಲ್ಲಿ ಉಲ್ಲೇಖಿತ ಸುತ್ತೋಲೆಯ ಮೂಲಕ ದಿನಾಂಕ: 14 ನವಂಬರ್ 2020 ರಿಂದ 24 ಜನವರಿ 2021ರವರೆಗೆ 10 ವಾರಗಳ ಕಾಲ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ನಡೆಸಲು ಸೂಚಿಸಲಾಗಿತ್ತು. ಪ್ರಸ್ತುತ ಈ ಅಭಿಯಾನವನ್ನು 28 ಫೆಬ್ರುವರಿ 2021 ರವರೆಗೆ ವಿಸ್ತರಿಸಲಾಗಿದೆ. ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕಾರ್ಯಯೋಜನೆ ರೂಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಭಿಯಾನ ಮತ್ತು ಮಕ್ಕಳ ಗ್ರಾಮ ಸಭೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಿಳಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

1. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಕಛೇರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ರವರ ಆಪ್ತ ಕಾರ್ಯದರ್ಶಿ
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
6. ಸಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ. ಇವರ ಆಪ್ತ ಕಾರ್ಯದರ್ಶಿ.

7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
13. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
14. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
15. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
16. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
17. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಆಯುಕ್ತರು, ಪಂಚಾಯರ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಆಪ್ತ ಸಹಾಯಕರು, ಕೆ.ಜಿ.ರಸ್ತೆ, ಬೆಂಗಳೂರು.
19. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಭರಾಜು ಮತ್ತು ನೈರ್ಮಲ್ಯ ಇಲಾಖೆ, ಇವರ ಆಪ್ತ ಸಹಾಯಕರು
20. ಆಯುಕ್ತರು, ಕಾರ್ಮಿಕ ಇಲಾಖೆ , ಕಾರ್ಮಿಕ ಭವನ, ಬೆಂಗಳೂರು.
21. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.
22. ನಿರ್ದೇಶಕರು, ಮಕ್ಕಳ ಸಂರಕ್ಷಣಾ ನಿರ್ದೇಶನಾಲಯ / ಐ.ಸಿ.ಪಿ.ಎಸ್, ಕರ್ನಾಟಕ ಸರ್ಕಾರ
23. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
24. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿ ಭವನ, ಹಡ್ಸನ್ ವೃತ್ತ , ನೃಪತುಂಗ ರಸ್ತೆ, ಬೆಂಗಳೂರು.
25. ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು
26. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ.